# ಎಳೆ ವಯಸ್ಸು V/s ಇಳಿ ವಯಸ್ಸು



**ವಯಸ್ಸಾದವರಿಗೂ, ಅವರ ಮಕ್ಕಳಿಗೂ ಪ್ರತೀ ಮನೆಯಲ್ಲೂ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ವಯಸ್ಸಿನ ಅಂತರವೂ ಇದಕ್ಕೆ ಒಂದು ಕಾರಣ ಆಗಿರಬಹುದು. ದೇಹ ದಣಿದಿದ್ದರೂ, ಮನಸ್ಸು ಮಾತ್ರ ದೇಹಕ್ಕಾಗಿರುವ ವಯಸ್ಸನ್ನು ಒಪ್ಪುವುದೇ ಇಲ್ಲ! ಮಕ್ಕಳಿಗೂ ಯೌವ್ವನದ ಉತ್ಸಾಹದಲ್ಲಿ ವಯಸ್ಸಾದ ಪೋಷಕರ ನೋವು ನಲಿವುಗಳ ಬಗ್ಗೆ ಗಮನ ಇರುವುದಿಲ್ಲ.**

**■ ಲಾವಣ್ಯಗೌರಿ ವೆಂಕಟೇಶ್**

'ಡೇ ಕೇರ್ ಸೆಂಟರ್ ಫಾರ್ ಓಲ್ಡ್ ಏಜ್ ಪೀಪಲ್' (ವಯಸ್ಸಾದವರಿಗಾಗಿ ಬೆಳಗಿನ ಪಾಲನಾ ಕೇಂದ್ರ)!– ಇದೊಂದು ಜಾಹೀರಾತು ಫಲಕ. ಮಕ್ಕಳಿಗೆಂದೇ 'ಡೇ ಕೇರ್ ಸೆಂಟರ್'ಇರೋದು ಎಲ್ಲರಿಗೂ ಗೊತ್ತು. ಕೆಲಸಕ್ಕೆ ಹೋಗುವ ಪೋಷಕರು ಮಕ್ಕಳನ್ನು ಈ ಸೆಂಟರ್‌ಗಳಲ್ಲಿ ಬೆಳಗ್ಗೆ ಬಿಟ್ಟು ಮತ್ತೆ ಸಂಜೆ ಬರುವಾಗ ಕರೆತರುತ್ತಾರೆ. ಆದರೆ, ವಯಸ್ಸಾದವರಿಗಾಗಿಯೂ ಈ 'ಡೇ ಕೇರ್' ಸೆಂಟರ್‌ಗಳಿರುವುದು ಅಚ್ಚರಿಯ ಸಂಗತಿ.

ವಯಸ್ಸಾದ ಮೇಲೆ ಪ್ರತಿಯೊಬ್ಬರೂ ಮಕ್ಕಳಂತೆಯೇ ಆಗಿಬಿಡುತ್ತಾರೆ. ಇಬ್ಬರಿಗೂ ಇರುವ ವ್ಯತ್ಯಾಸವೆಂದರೆ, ಮಕ್ಕಳ ಗಮನವನ್ನು ಬೇರೆಡೆಗೆ ಸುಲಭವಾಗಿ ಸೆಳೆದು ಅವರನ್ನು ಸಮಾಧಾನ ಪಡಿಸಬಹುದು. ಇಳಿ ವಯಸ್ಸಿನಲ್ಲಿ ಈ ರೀತಿ ಮಾಡುವುದು ಕಷ್ಟ. ಮನಸ್ಸು ಮಕ್ಕಳಂತೆಯೇ ಇದ್ದರೂ ಆಲೋಚನಾ ಶಕ್ತಿ ಭಿನ್ನವಾಗಿರುತ್ತದೆ.

ಒಂದು ರೀತಿಯಲ್ಲಿ ಈ ಪರಿಕಲ್ಪನೆ ಅನುಕೂಲಕರವೇ ಆಗಿದೆ. ಸಮಯಾಭಾವದಿಂದಲೋ ಅಥವಾ ವೈಮನಸ್ಯದಿಂದಲೋ ನೋಡಿಕೊಳ್ಳಲು ಕಷ್ಟವೆಂದು ವಯಸ್ಸಾದ ತಂದೆ ತಾಯಿ, ಅತ್ತೆಮಾವ ಇವರುಗಳನ್ನು ವೃದ್ಧಾಶ್ರಮಕ್ಕೆ ಸೇರಿಸಿದ ಘಟನೆಗಳಿವೆ. ಕನಿಷ್ಟಪಕ್ಷ ಈ ರೀತಿಯಾದ ಕೇಂದ್ರಗಳಿಂದ ರಾತ್ರಿ ಹೊತ್ತಾದರೂ ವಯಸ್ಸಾದವರು ಮಕ್ಕಳ ಬಳಿಯೇ ಇರುತ್ತಾರಲ್ಲಾ ಎನ್ನುವ ಸಣ್ಣ ನೆಮ್ಮದಿ ಇದರ ಹಿಂದೆ ಇದೆ.

ಎಷ್ಟೋ ಮಂದಿ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ತಮ್ಮ ಪೋಷಕರನ್ನು ಬಳಸಿಕೊಳ್ಳುತ್ತಾರೆ. ಪೋಷಕರು ಕೈಲಾಗದ ಸ್ಥಿತಿ ತಲುಪಿದ ತಕ್ಷಣ ಅವರನ್ನು ವೃದ್ಧಾಶ್ರಮಕ್ಕೆ ತಲುಪಿಸುತ್ತಾರೆ! ಜಗತ್ತು ನಿಜಕ್ಕೂ ಸ್ವಾರ್ಥಿಯಾಗುತ್ತಿದೆ. ಆದರೆ ಎಲ್ಲಾ ಮಕ್ಕಳೂ ಈ ರೀತಿ ಇರುವುದಿಲ್ಲ.

ವಯಸ್ಸಾದವರಿಗೂ, ಅವರ ಮಕ್ಕಳಿಗೂ ಮನೆಯಲ್ಲಿ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ವಯಸ್ಸಿನ ಅಂತರವೂ ಇದಕ್ಕೆ ಒಂದು ಕಾರಣ ಆಗಿರಬಹುದು. ಆಲೋಚನೆಗಳು, ಅಭಿಪ್ರಾಯಗಳು ಬಹಳವಾಗಿ ಬೇರೆ ಬೇರೆಯಾಗಿರುತ್ತವೆ. ವಯಸ್ಸಾದವರಿಗೆ, 'ನಾವು ಬೆಳೆಸಿದ ಮಕ್ಕಳು ನಮಗೇ ಬುದ್ಧಿ ಹೇಳುತ್ತಾರೆ' ಎನ್ನುವ ಭಾವನೆ. ಇನ್ನು ಮಕ್ಕಳಿಗೆ, ವಯಸ್ಸಾದ ಮೇಲೆ ಕೈಲಾಗದ ಕೆಲಸಗಳನ್ನು ಯಾಕಾದರೂ ಮಾಡುತ್ತಾರೆನ್ನುವ ಆತಂಕ. ಈ ರೀತಿಯಾದ ವಿಭಿನ್ನ ಆಲೋಚನೆಗಳು ಒಂದಕ್ಕೊಂದು ಹೊಂದಿಕೊಳ್ಳದೆ ಜಗಳಗಳು ಶುರುವಾಗಿ ಅತಿರೇಕಕ್ಕೆ ಹೋಗುತ್ತವೆ. ಅತ್ತೆ–ಸೊಸೆ, ಮಾವ–ಅಳಿಯನೇ ಆಗಬೇಕೆಂದಿಲ್ಲ. ಎಷ್ಟೋ ಮನೆಗಳಲ್ಲಿ ಅಪ್ಪ–ಮಗ, ಅಮ್ಮ–ಮಗಳು, ಅಜ್ಜಿ–ಮೊಮ್ಮಕ್ಕಳು, ತಾತ–ಮೊಮ್ಮಕ್ಕಳ ನಡುವೆಯೇ ಭಿನ್ನಾಭಿಪ್ರಾಯಗಳಿರುವ ಸಾಧ್ಯತೆಗಳಿಲ್ಲವೇನು?

ದೇಹಕ್ಕೆ ವಯಸ್ಸು ಆಗುತ್ತಿದ್ದಂತೆಯೇ ಬಹಳಷ್ಟು ಬದಲಾವಣೆಗಳು ಆಗತೊಡಗುತ್ತವೆ. ದೇಹ ದಣಿದಿದ್ದರೂ, ಮನಸ್ಸು ಮಾತ್ರ ಚಿಂತನೆಯಲ್ಲಿ ದೇಹಕ್ಕಾಗಿರುವ ವಯಸ್ಸನ್ನು ಒಪ್ಪುವುದೇ ಇಲ್ಲ! ಮಕ್ಕಳಿಗೂ ಯೌವ್ವನದ ಉತ್ಸಾಹದಲ್ಲಿ ವಯಸ್ಸಾದ ಪೋಷಕರ ನೋವು ನಲಿವುಗಳ ಬಗ್ಗೆ ಗಮನವೇ ಇರುವುದಿಲ್ಲ.